**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**
**ಮಾಗಡಿ**
**ಕ್ರಿಮಿನಲ್ ಪ್ರಕರಣ ಸಂಖ್ಯೆ -2722/2024**
**ಚಾಸಾ - 01 / ಪ್ರಾಸಾ - 01**

| | |
|---|---|
| ಹೆಸರು | **ದೇವೆಂದ್ರ ಸಿಂಗ್** |
| ತಂದೆಯ ಹೆಸರು | **ಆನಂದ್ ಸಿಂಗ್** |
| ವಯಸ್ಸು | **24** |
| ಉದ್ಯೋಗ | **ಖಾಸಗಿ ಕೆಲಸ** |
| ವಿಳಾಸ | **ಬೆಂಗಳೂರು** |

ದಿನಾಂಕಃ**28-03-2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದಃ-**

**ಸಾಕ್ಷಿಗೆ ಕನ್ನಡ ಬಾಷೆಯು ಬರುವುದಿಲ್ಲ ಮತ್ತು ಅವರಿಗೆ ಆಂಗ್ಲ ಬಾಷೆಯು ಬರುತ್ತದೆ ಎಂದು ಹೇಳಿದ ಕಾರಣ ನ್ಯಾಯಾಲಯಕ್ಕೆ ಅಂಗ್ಲ ಬಾಷೆಯು ಬರುವ ಕಾರಣದಿಂದ ಮಾನ್ಯ ಎಪಿಪಿ ಮತ್ತು ಆರೋಪಿಯ ಪರ ವಕೀಲರು ನ್ಯಾಯಾಲಯವು ಅನುವಾದಕರಾಗಲು ಸಮ್ಮತಿಸಿರುತ್ತಾರೆ.**

ಮೃತ ವ್ಯಕ್ತಿಯು ನನ್ನ ತಂಗಿಯಾಗಿರುತ್ತಾರೆ. ದಿ.29-03-2023 ರಂದು ಮಧ್ಯಾಹ್ನ 3.15 ರ ಸಮಯದಲ್ಲಿ ನನ್ನ ತಂಗಿಯ ಸ್ನೇಹಿತರಾದ ಚಾಸಾ-2 ರವರು ನನಗೆ ಕರೆ ಮಾಡಿ ನನ್ನ ತಂಗಿಗೆ ಅಪಘಾತವಾಗಿದೆ ಮತ್ತು ಅವರನ್ನು ಕ್ಲಿನಿಕ್‌ಗೆ ಕರೆದುಕೊಂಡು ಹೋಗಲಾಗಿದೆ ಎಂದು ತಿಳಿಸಿದರು. ನಂತರ ನನ್ನ ತಂಗಿಯನ್ನು ಎಸ್. ಜೆ. ಜೆ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿಸಿದರು. ತಕ್ಷಣ ನಾನು ಆಸ್ಪತ್ರೆಗೆ ಹೋಗಿದ್ದೇನು ಮತ್ತು ಅಸ್ಪತ್ರೆಯನ್ನು ತಲುಪುವ ಮೊದಲೇ ನನ್ನ ತಂಗಿಯು ಸಂಜೆ 4.45 ರ ಸಮಯದಲ್ಲಿ ಮೃತಪಟ್ಟಿದ್ದಾರೆ ಎಂದು ತಿಳಿಸಿದರು.

ನಾನು ನನ್ನ ತಂಗಿಯ ಸ್ನೇಗಿತರಾದ ಚಾಸಾ-2 ಮತ್ತು 4 ರವರ ಬಳಿ ವಿಚಾರಿಸಿದಾಗ ಅವರು ಒಂದು ಟೆಂಪೋ ಬಂದು ನನ್ನ ತಂಗಿಗೆ ಡಿಕ್ಕಿಪಡಿಸಿ ಅವಳನ್ನು ಸುಮಾರು ದೂರ ಎಳೆದುಕೊಂಡು ಹೋಗಿತ್ತು ಎಂದು ತಿಳಿಸಿದರು.

ನಂತರ ಚಾಲಕನು ಓಡಿ ಹೋದರು ಎಂದು ತಿಳಿಸಿದರು. ಸದರಿ ಅಪಘಾತಕ್ಕೆ ಸಂಬಂಧಿಸಿದಂತೆ ನಾನು ದೂರನ್ನು ನೀಡಿರುತ್ತೇನೆ.

ಈಗ ಸಾಕ್ಷಿಗೆ ದೂರನ್ನು ತೋರಿಸಿದ್ದು, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿಯು ಗುರುತಿಸಿರುತ್ತಾರೆ. ದೂರನ್ನು ನಿಪಿ-1 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಾನು ನನ್ನ ಸ್ನೇಹಿತರಿಗೆ ಹಿಂದಿ ಬಾಷೆಯಲ್ಲಿ ಹೇಳಿದೆನು ಮತ್ತು ಅವರು ಕನ್ನಡ ಬಾಷೆಯಲ್ಲಿ ಅನುವಾದ ಮಾಡಿ ನಿಪಿ-1 ನ್ನು ಬರೆದಿರುತ್ತಾರೆ.

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು:- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ:-**

ನಿಮ್ಮ ತಂಗಿಯವರು ಬೆಂಗಳೂರಿನ ಹೆಬ್ಬಾಳದ ಕೆಂಪಾಪುರದಲ್ಲಿ ಇರುವ ಪ್ರೆಸಿಡೆನ್ಸಿ ಕಾಲೇಜಿನಲ್ಲಿ ಕೊನೆಯ ವರ್ಷದ ಬಿ.ಕಾಂ ವಿದ್ಯಾಭ್ಯಾಸವನ್ನು ಮಾಡುತ್ತಿದ್ದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ದಿ.29-03-2024 ರಂದು ಸುಮಾರು 4 ಗಂಟೆ ಸಮಯದಲ್ಲಿ ನಿಮ್ಮ ತಂಗಿಯ ಸ್ನೇಹಿತರಾದ ಚಾಸಾ2 ರವರು ನಿಮಗೆ ಫೋನ್ ಮಾಡಿ ತಾನು ಮತ್ತು ನಿಮ್ಮ ತಂಗಿ ಇಬ್ಬರೂ ದ್ವಿ ಚಕ್ರವಾಹನ ಸಂ. ಕೆಎ-05-ಎಎನ್-0403 ರಲ್ಲಿ ಮಾಗಡಿ ಹತ್ತಿರ ಇರುವ ಸಾವನದುರ್ಗ ಬೆಟ್ಟಕ್ಕೆ ಹೋಗಿ ವಾಪಸ್ಸು ಬೆಂಗಳೂರಿಗೆ ಬರುತ್ತಿದ್ದಾಗ ಮಧ್ಯಾಹ್ನ 3.45 ಗಂಟೆಯಲ್ಲಿ ಮಾಗಡಿ ರಸ್ತೆಯಲ್ಲಿ ಟಿಪ್ಪರ್ ಲಾರಿ ಸಂ. ಕೆಎ-25-ಎಎ-6915 ರ ಚಾಲಕ ಹಿಂದಿನಿಂದ ಬಂದು ಡಿಕ್ಕಿ ಹೊಡೆಸಿದ್ದರಿಂದ ಚಾಸಾ-2 ರವರಿಗೆ ಮೂಗೇಟು ಮತ್ತು ನಿಮ್ಮ ತಂಗಿಗೆ ಜಾಸ್ತಿ ಏಟಾಗಿತ್ತು ಎಂದು ತಿಳಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಚಾಸಾ-2 ರವರು ನಿಮಗೆ ನಿಮ್ಮ

ತಂಗಿಯನ್ನು ಬೆಂಗಳೂರಿನ ಕಡೆಗೆ ಆಸ್ಪತ್ರೆಗೆ ಕರೆದುಕೊಂಡು ಬರುತ್ತಿದ್ದೇನೆ ಮತ್ತು ನಿಮ್ಮನ್ನು ಬೇಗ ಬರುವಂತೆ ತಿಳಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ. ಈ ಮೇಲೆ ಹೇಳಿರುವ ಟಿಪ್ಪರ್ ಲಾರಿಯ ಚಾಲಕನ ನಿರ್ಲಕ್ಷತೆಯಿಂದ ಸದರಿ ಅಪಘಾತವು ಸಂಭವಿಸಿತ್ತು ಎಂದು ನಿಮಗೆ ಚಾಸಾ-2 ರವರು ತಿಳಿಸಿದರು ಎಂದರೆ ಸಾಕ್ಷಿಯು ಹೌದು ಎನ್ನುತ್ತಾರೆ.

**ಪಾಟೀ ಸವಾಲುಃ- ಆರೋಪಿಯ ಪರ ಶ್ರೀ.ಎನ್. ಜಿ, ವಕೀಲರಿಂದಃ-**

ನನಗೆ ಕನ್ನಡ ಬಾಷೆಯನ್ನು ಓದಲು ಮತ್ತು ಬರೆಯಲು ಬರುವುದಿಲ್ಲ, ಆದರೆ ಸ್ವಲ್ಪ ಮಟ್ಟಿಗೆ ಮಾತನಾಡುತ್ತೇನೆ. ನನಗೆ ನಿಪಿ-1 ರಲ್ಲಿ ಇರುವ ವಿಷಯದ ಬಗ್ಗೆ ಮಾಹಿತಿ ಇದೆ. ನೀವು ನಿಪಿ-1 ರಂತೆ ಯಾವುದೇ ದೂರನ್ನು ನೀಡಿರುವುದಿಲ್ಲ ಮತ್ತು ನ್ಯಾಯಾಲಯಕ್ಕೆ ಬಂದು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ. ನೀವು ಯಾವ ಸಮಯದಲ್ಲಿ ನಿಪಿ-1 ರಂತೆ ದೂರನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ತನಗೆ ನಿರ್ದಿಷ್ಟವಾಗಿ ಸಮಯವನ್ನು ಹೇಳಲು ಆಗುವುದಿಲ್ಲ, ಆದರೆ ರಾತ್ರಿ ಸಮಯದಲ್ಲಿ ದೂರನ್ನು ನೀಡಿದ್ದೇನೆ ಎನ್ನುತ್ತಾರೆ. ಯಾವುದೇ ಅಪಘಾತ ನಡೆಯದೇ ಇದ್ದರೂ ನೀವು ಆರೋಪಿಯ ವಿರುದ್ದ ಸುಳ್ಳು ದೂರನ್ನು ನೀಡಿರುತ್ತೀರಾ ಎಂದರೆ ಸಾಕ್ಷಿಯು ಸರಿಯಲ್ಲ ಎನ್ನುತ್ತಾರೆ.

**ಮರು ವಿಚಾರಣೆ :- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**2 ನೇ ಅಪರ ನ್ಯಾಯಿಕ ದಂಡಾಧಿಕಾರಿ ಮತ್ತು ಜೆಎಂಎಫ್‌ಸಿ ನ್ಯಾಯಾಲಯ**

**ಮಾಗಡಿ**

**ಕ್ರಿಮಿನಲ್ ಪ್ರಕರಣ ಸಂಖ್ಯೆ -**

**ಚಾಸಾ - 01 / ಪ್ರಾಸಾ - 01**

| | |
|---|---|
| ಹೆಸರು | |
| ತಂದೆಯ / ಗಂಡನ ಹೆಸರು | |
| ವಯಸ್ಸು | |
| ಉದ್ಯೋಗ | ವ್ಯವಸಾಯ |
| ವಿಳಾಸ | |

ದಿನಾಂಕಃ **07-03-2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆ - ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ -**

**ಈ ಹಂತದಲ್ಲಿ ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ, ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕರ ಮನವಿಯನ್ನು ಪುರಸ್ಕರಿಸಿ, ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.**

**ಪಾಟೀ ಸವಾಲು- ಮಾನ್ಯ ಸರ್ಕಾರಿ ಸಹಾಯಕ ಅಭಿಯೋಜಕ ರವರಿಂದ ಃ-**

**ಪಾಟೀ ಸವಾಲು - ಆರೋಪಿ ಪರ ಶ್ರೀ.** ವಕೀಲರಿಂದ ಃ-

ಆರೋಪಿಗಳ ಪರವಾಗಿ ಏನು ಪಾಟೀ ಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

**ಮರು ವಿಚಾರಣೆ- ಇರುವುದಿಲ್ಲ.**

**ಓ. ಹೇ. ಕೇ. ಸ. ಇ. ಎ. ಒಪ್ಪಿರುತ್ತಾರೆ,**

**2 ನೇ ಅ. ನ್ಯಾ. ದಂ. ಮತ್ತು ಜೆಎಂಎಫ್‌ಸಿ, ಮಾಗಡಿ.**

**ಸಾಕ್ಷಿಗೆ ಕನ್ನಡ ಬಾಷೆಯು ಬಾರದೇ ಇರುವ ಕಾರಣ ವಕೀಲರಾದ ಶ್ರೀಮತಿ. ಶ್ರುತಿರವರನ್ನು ಅನುವಾದಕರಾಗಿ ನೇಮಕ ಮಾಡಲು ಮಾನ್ಯ ಎಪಿಪಿ ಮತ್ತು ಆರೋಪಿಯ ಪರ ವಕೀಲರು ಸಮ್ಮತಿಸಿರುತ್ತಾರೆ.**